ಆ) I) ಒದಗಿಸಲಾಗಿರುವ ಅನುದಾನ ವಿವರ ಕೆಳಕಂಡಂತಿದೆ:

1) ಮಾನುಗಾರಿಕಾ ರಸ್ತೆಗಳು : ರೂ:55 ಲಕ್ಷ

2) ಆರ್‌ಐಡಿಎಫ್ ಕಾಮಗಾರಿಗಳು : ರೂ:85 ಲಕ್ಷ

II) ಅವಶ್ಯಕತೆಗನುಗುಣವಾಗಿ ಹಾಗೂ ಅನುದಾನ ಲಭ್ಯತೆ ಅನ್ವಯ ಹಣವನ್ನು ಬಿಡುಗಡೆ ಮಾಡಲಾಗಿದೆ.

III) ಅನುದಾನ ಲಭ್ಯತೆಗನುಗುಣವಾಗಿ ರಸ್ತೆ ದುರಸ್ತಿ ಕಾರ್ಯಕೈಗೊಂಡು ಮುಗಿಸಲಾಗುವುದು.

ಇ) ಪರಿಶೀಲಿಸಿ ದುರಸ್ತಿಗೊಳಿಸಲು ಕ್ರಮ ಜರುಗಿಸಲಾಗುವುದು.

ರಾಜ್ಯದಲ್ಲಿನ ಒಳನಾಡು ಹಾಗೂ ಕರಾವಳಿ ಮೀನುಗಾರಿಕೆಯ ಸ್ಥಿತಿಗತಿಗಳು.

567(661)

ಶ್ರೀ ಜಯ ಪ್ರಕಾಶ್ ಹೆಗ್ಗಡೆ ಕೆ. (ಬ್ರಹ್ಮಾವರ): ಮಾನ್ಯ ಮಾನುಗಾರಿಕೆ, ಬಂದರು ಮತ್ತು ಪ್ರದೇಶಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕಲಾವಳಿ ಮಾನುಗಾರಿಕೆಯಲ್ಲಿ ಮಾನುಗಳ ಲಭ್ಯತೆಯ ಬರಗಾಲ ಉಂಟಾಗಿದೆಯೇ: ಹೌದಾದಲ್ಲಿ ಅದಕ್ಕೆ ಸರ್ಕಾರದವರು ಯಾವ ರೀತಿಯ ಪರಿಹಾರವನ್ನು ಒದಗಿಸಿದ್ದಾರೆ?

ಆ) ರಾಜ್ಯದ ಯಾವ ಯಾವ ಮಾನುಗಾರಿಕಾ ಬಂದರುಗಳ ಅಭಿವೃದ್ಧಿ ಮಾಡಲಾಗಿದೆ ಮತ್ತು ಮಾಡಲು ಯೋಜನೆಗಳನ್ನು ರೂಪಿಸಲಾಗಿದೆ: ಅದಕ್ಕೆ ಕೇಂದ್ರ ಸರ್ಕಾರದ ಅನುಮೋದನೆ ದೊರೆತಿದೆಯೆ ರಾಜ್ಯ ಸರ್ಕಾರದವರು ತಮ್ಮ ಪ್ರಸ್ತಾವನೆಯನ್ನು ಕೇಂದ್ರಕ್ಕೆ ಯಾವಾಗ ಕಳುಹಿಸಲು ಕ್ರಮ ಜರುಗಿಸಿದ್ದರು?

ಇ) ಒಳನಾಡು ಮಾನುಗಾರಿಕೆಯ ವಲಯದಲ್ಲಿ ಮಾನು ಮರಿಗಳ ಉತ್ಪಾದನೆ, ಮಾರಾಟ ಮತ್ತಿತರ ವಿಚಾರದಲ್ಲಿ ಸರ್ಕಾರದವರ ಕ್ರಮಗಳೇನು: ಮಾನು ಮಾರಾಟ ಹೆಚ್ಚಳಕ್ಕಾಗಿ ಯಾವ ಪ್ರೋತ್ಸಾಹ ಕ್ರಮಗಳನ್ನು ಜರುಗಿಸಲಾಗಿದೆ?

ಶ್ರೀ ಬಿ.ರಮಾನಾಥ ರೈ (ಮಿನುಗಾರಿಕೆ,. ಬಂದರು ಮತ್ತು ಪ್ರದೇಶಾಭಿವೃದ್ಧಿ ಸಚಿವರು):

ಅ) ಇಲ್ಲ.

ಪರಿಹಾರ ಒದಗಿಸುವ ಪ್ರಶ್ನೆ ಉದ್ಭವಿಸುವುದಿಲ್ಲ.

ಆ) ರಾಜ್ಯದಲ್ಲಿ ಈ ಕೆಳಗಿನ ಮಿನುಗಾರಿಕೆ ಬಂದರುಗಳ ಅಭಿವೃದ್ಧಿ ಮಾಡಲಾಗಿದೆ.

1) ಮಂಗಳೂರು ಒಂದನೇ ಹಂತ

2) ಮಲ್ಪೆ ಒಂದನೇ ಹಂತ

3) ಹೊನ್ನಾವರ

4) ತದಡಿ

5) ಕಾರವಾರ ಒಂದನೇ ಹಂತ

ಈ ಕೆಳಗಿನ ಮಿನುಗಾರಿಕಾ ಬಂದರುಗಳನ್ನು : ತಂಗುದಾಣಗಳನ್ನು ಅಭಿವೃದ್ಧಿಪಡಿಸಲು ಯೋಜನೆಗಳನ್ನು ರೂಪಿಸಲಾಗಿದೆ.

1) ಮಂಗಳೂರು 2ನೇ ಹಂತ

2) ಹೆಜಮಾಡಿ ಕೋಡಿ

3) ಮಲ್ಪೆ ಎರಡನೇ ಹಂತ

4) ಕೋಡಿ ಬೆಂಗ್ರೆ

5) ಹಂಗಾರ ಕಟ್ಟೆ

6) ಗಂಗೊಳ್ಳಿ

7) ಅಳ್ವೆಕೋಡಿ : ತೆಂಗಿನಗುಂಡಿ

8) ಬೇಲಿಕೇರಿ

9) ಕಾರವಾರ ಎರಡನೇ ಹಂತ

ಕೇಂದ್ರ ಸರ್ಕಾರದ ಅನುಮೋದನೆ ದೊರಕಿರುವ ವಿವರಗಳು.

ಕ್ರ. ಸಂ.	ಮಿನುಗಾರಿಕೆ ಬಂದರು: ತಂಗುದಾಣ
1)	ಮಂಗಳೂರು 2ನೇ ಹಂತ
2)	ಹೆಜಮಾಡಿ ಕೋಡಿ
3)	ಮಲ್ಪೆ 2ನೇ ಹಂತ
4)	ಕೋಡಿ ಬೆಂಗ್ರೆ
5)	ಗಂಗೊಳ್ಳಿ
6)	ಅಳ್ವೆಕೋಡಿ
7)	ಬೇಲಿಕೇರಿ
8)	ಕಾರವಾರ 2ನೇ ಹಂತ.

ಕೇಂದ್ರ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿದ್ದು ಮಂಜೂರಾತಿ ನಿರೀಕ್ಷಿಸಲಾಗಿರುವ ವಿವರಗಳು:

ಮಿನುಗಾರಿಕೆ ಬಂದರು: ತಂಗುದಾಣ	ಪ್ರಸ್ತಾವನೆ ಸಲ್ಲಿಸಿದ ದಿನಾಂಕ
1) ಹಂಗಾರ ಕಟ್ಟೆ	22-04-99
2) ಬೇಲಿಕೇರಿ	13-02-2001

(ಪರಿಷ್ಕೃತ ಅಂದಾಜು ರೂ. 141.00 ಲಕ್ಷಗಳಿಗೆ ಮಂಜೂರಾತಿಗಾಗಿ ಸಲ್ಲಿಸಿದೆ)

ಇ) ಒಳನಾಡು ಮಿನುಗಾರಿಕೆ ವಲಯದಲ್ಲಿ ಮಿನು ಮರಿಗಳನ್ನು ಸರ್ಕಾರಿ ಕರ್ನಾಟಕ ಸಹಕಾರಿ ಮಿನುಗಾರಿಕಾ ಮಹಾ ಮಂಡಳಿ, ಮೈಸೂರು, ತುಂಗಭದ್ರಾ ಬೋರ್ಡ್ ಹಾಗೂ ಸರ್ಕಾರದಿಂದ ಸಹಾಯಧನ ಪಡೆದ ಮಿನುಮರಿ ಉತ್ಪಾದನೆ ಕೇಂದ್ರಗಳಲ್ಲಿ ಉತ್ಪಾದಿಸಿ ಮರಿಗಳನ್ನು ಬೇಡಿಕೆ ಇರುವ ಮಿನು ಕೃಷಿಕರಿಗೆ ಮಾರಾಟದ ಮುಖಾಂತರ ಒದಗಿಸಲಾಗುತ್ತಿದೆ.

ಮಿನು ಮಾರಾಟದ ಕ್ಷೇತ್ರಗಳಲ್ಲಿ ಕರ್ನಾಟಕ ಸಹಕಾರಿ ಮಿನುಗಾರಿಕೆ ಮಹಾ ಮಂಡಳಿ ವ್ಯವಸ್ಥಿತ ಮಿನು ಮಾರಾಟ ಜಾಲವನ್ನು ಪ್ರಸ್ತುತ ಮೈಸೂರು, ಮಂಡ್ಯ,

ಹಾಸನ, ಕೊಡಗು, ಚಿಕ್ಕಮಗಳೂರು ಹಾಗೂ ಬೆಂಗಳೂರು ಮಹಾನಗರದಲ್ಲಿ ಕಿಯೋಸ್ಕ ಸ್ಥಾಪನೆ ಮುಖಾಂತರ ಹಮ್ಮಿಕೊಂಡಿದೆ. ಹಾಗೆಯೇ ಮಿಾನನ್ನು ತಾಜಾ ರೀತಿಯಲ್ಲಿ ನಿರ್ವಹಿಸಿ ಆರೋಗ್ಯವಾಗಿ ಮಾರುಕಟ್ಟೆಗೆ ಸಾಗಿಸಿ ಮಾರಾಟ ಮಾಡಲು ಬೇಕಾಗುವ ಬೈಸಿಕಲ್ ಮತ್ತು ಶಾಖ ನಿರೋಧಕ ಪೆಟ್ಟಿಗೆಗಳನ್ನು ಒದಗಿಸಲು ನೆರವು ನೀಡಲಾಗುತ್ತಿದೆ.

ಮತ್ಸ್ಯವಾಹಿನಿ ಯೋಜನೆಯಡಿ ತಾಜಾ ಮಿಾನನ್ನು ಸಾಗಾಣಿಕೆ ಮಾಡಲು ತ್ರಿಚಕ್ರ ಟೆಂಪೋ ರಿಕ್ಷ ಖರೀದಿಸಲು ರೂ:25000-00ಗಳ ಸಹಾಯ ಧನವನ್ನು ಫಲಾನುಭವಿಗಳಿಗೆ ನೀಡುವ ಉದ್ದೇಶದಿಂದ ರೂ:5.00ಲಕ್ಷ ಆಯವ್ಯಯ ಒದಗಿಸಿಕೊಳ್ಳಲಾಗಿದೆ.

ತುಮಕೂರು-ಹೊನ್ನಾವರ ರಾಷ್ಟ್ರೀಯ ಹೆದ್ದಾರಿ ಕಾಮಗಾರಿ.

568(621)

ಶ್ರೀ ಕಟ್ಟಾ ಸುಬ್ರಮಣ್ಯ ನಾಯ್ಡು(ಶಿವಾಜಿನಗರ): ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ. ತುಮಕೂರು-ಹೊನ್ನಾವರ ರಾಷ್ಟ್ರೀಯ ಹೆದ್ದಾರಿ ಹಣದ ಕೊರತೆಯಿಂದ ಕಾಮಗಾರಿಗಳು ಕುಂಠಿತಗೊಂಡಿರುವುದು ನಿಜವೇ?

ಆ. ಈ ರಾಷ್ಟ್ರೀಯ ಹೆದ್ದಾರಿಯನ್ನು ಸರ್ಕಾರ ಘೋಷಿಸಿದ್ದು ಯಾವಾಗ? ಈ ರಸ್ತೆಯ ಉದ್ದ ಎಷ್ಟು? ಕಾಮಗಾರಿ ಮೊತ್ತವೆಷ್ಟು? ಈಗಾಗಲೇ ಎಷ್ಟು ಸಾಗಿದೆ? ಪೂರ್ಣಗೊಳ್ಳಲು ಕಾಲಮಿತಿಯನ್ನು ಹಾಕಿಕೊಳ್ಳಲಾಗಿದೆಯೇ?

ಇ. ಇದಕ್ಕೆ ಪೂರಕವಾಗಿ ರಸ್ತೆ ಪರಿವರ್ತನಾ ಕಾರ್ಯ ಆರಂಭವಾಗಿದೆಯೇ? ಎಷ್ಟು ಕಿ.ಮಿಾ. ರಸ್ತೆ ಕೆಲಸ ಪೂರ್ಣಗೊಂಡಿದೆ?

ಶ್ರೀ ಧರ್ಮಸಿಂಗ್ (ಲೋಕೋಪಯೋಗಿ ಸಚಿವರು):

ಅ. ಇಲ್ಲ.

ಆ. ಈ ರಾಷ್ಟ್ರೀಯ ಹೆದ್ದಾರಿಯನ್ನು ದಿ: 6-1-1999ರಂದು ಕೇಂದ್ರ ಸರ್ಕಾರ ರಾಷ್ಟ್ರೀಯ ಹೆದ್ದಾರಿ ಎಂದು ಘೋಷಿಸಿತು. ಈ ಹೆದ್ದಾರಿಯು ಒಟ್ಟು 365 ಕಿಮಿಾ.